ಆ) ಹಾಗಿದ್ದಲ್ಲಿ, ಆದು ಈಗ ಯಾವ ಹಂತದಲ್ಲಿದೆ ?

ಡಾ।। ಬಿ.ಆರ್. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಹೌದು.

ಆ) ಈ ಯೋಜನೆಯ ಶಕ್ಯತೆ ಮತ್ತು ನೀರಿನ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು-ಮೈಸೂರು ಹೆದ್ದಾರಿಯ ಅಭಿವೃದ್ಧಿ

495 (827): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು--ಮೈಸೂರು ಹೆದ್ದಾರಿಯಲ್ಲಿ ದಿನೇದಿನೇ ವಾಹನಗಳ ಸಂಚಾರ ಹೆಚ್ಚಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ವಾಹನ ಸಂಚಾರದ ಅಧಿಕ ಒತ್ತಡ ತಾಳಲು ಮತ್ತು ವಾಹನ ಸಂಚಾರವನ್ನು ಸುಗಮಗೊಳಿಸುವ ದೃಷ್ಟಿಯಿಂದ ಬೆಂಗಳೂರು-ಮೈಸೂರು ಹೆದ್ದಾರಿಯನ್ನು ಅಭಿವೃದ್ಧಿಗೊಳಿಸಲು ಸರ್ಕಾರವು ಕೈಗೊಂಡ ಕ್ರಮವೇನು;

ಇ) ಈ ಹೆದ್ದಾರಿಯು ಅನೇಕ ಪಟ್ಟಣದ ವ್ಯಾಪ್ತಿಯಲ್ಲಿ ಹಾದು ಹೋಗುತ್ತಾ, ಇದ್ದು, ಸಂಚಾರದ ಒತ್ತಡವನ್ನು ನಿವಾರಿಸಲು, ಬೈಪಾಸ್ ರಸ್ತೆಗಳನ್ನು ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ವರ್ಷಕ್ಕೆ ಒಂದು ಕಿ.ಮೀ.ಗೆ ರೂ. 15,000-00ರಂತೆ ಹಣವನ್ನು ವಾರ್ಷಿಕ ನಿರ್ವಹಣೆಗಾಗಿದೆ ಹಾಗೂ ಎಲ್ಲಾ ಶೀರ್ಷಿಕೆಯಡಿ ಲಭ್ಯವಾದ 75ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಿಕೊಂಡು ರಸ್ತೆ ಮೇಲ್ಮೈ ಅಭಿವೃದ್ಧಿ, ರಸ್ತೆಗಳ ತಿರುವುಗಳ ಸರಳೀಕರಣ, ಸೇತುವೆಗಳ ವಿಸ್ತರಣೆ, ಹಳೇ ಸೇತುವೆಗಳ ಪುನರ್ ನಿರ್ಮಾಣ ಮುಂತಾದ ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ.

ಇ) ರಾಮನಗರ ಹಾಗೂ ಚೆನ್ನಪಟ್ಟಣ ವ್ಯಾಪ್ತಿಯಲ್ಲಿ ಈಗಾಗಲೇ ಬೈಪಾಸ್ ನಿರ್ಮಿಸಲಾಗಿದ್ದು ಉಪಯೋಗದಲ್ಲಿದೆ. ಮಂಡ್ಯ ಹಾಗೂ ಶ್ರೀರಂಗಪಟ್ಟಣದ ವ್ಯಾಪ್ತಿಯಲ್ಲಿ ಬೈಪಾಸ್ ರಸ್ತೆಗಳ ನಿರ್ಮಾಣದ ಪ್ರಸ್ತಾಪವು ಇರುವುದಿಲ್ಲ.

ಕನಸಗೇರಿ ಏತ ನೀರಾವರಿಯ ಅಂದಾಜು

496 (456): ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ):-

ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಬರುವ ಕನಸಗೇರಿ ಏತ ನೀರಾವರಿ ಯೋಜನೆಯ ಅಂದಾಜು ವೆಚ್ಚ ಎಷ್ಟು;

ಆ) 1986-87ರಲ್ಲಿ ಆ ಯೋಜನೆ ಮಂಜೂರಾಗಿದ್ದು ನಿಜವೇ, ಹಾಗಿದ್ದಲ್ಲಿ ಸದರಿ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;